02	ಉಡುಪಿ	ಕುಂದಾಪುರ	ಅಂಬೇಡ್ಕರ್ ಭವನ, ತಾಲ್ಲೂಕು ಕಛೇರಿ ಸಮೀಪ, ಕುಂದಾಪುರ	2	0	2
			ಸಮುದಾಯ ಭವನ, ಗಾಂಧಿಪಾರ್ಕ್	0	6	6
ಒಟ್ಟು ಪೂರ್ತ				8	8	16

ಶ್ರೀ ಕೃಷ್ಣ ಬೈರೇಗೌಡ (ಮಾನ್ಯ ಕೃಷಿ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಶಾಸಕರ ಜೊತೆಗೆ ಮಾತನಾಡಿ ಇನ್ನೂ ಹೆಚ್ಚಿನ ಕೇಂದ್ರ ತೆರೆಯಬೇಕೆಂದು ನಮ್ಮ ಅಧಿಕಾರಿಗಳಿಗೆ ನಿರ್ದೇಶಕರ ಮುಖಾಂತರ ಸೂಚನೆ ಕೊಟ್ಟಿದ್ದೇವೆ. ತಾವು ಜಿಲ್ಲಾಧಿಕಾರಿಗಳ ಹತ್ತಿರ ಮಾತನಾಡಿದರೆ ನಿಮ್ಮ ಸಲಹೆಯ ಮೇರೆಗೆ ಇನ್ನೂ ಹೆಚ್ಚಿನ ಕೇಂದ್ರಗಳನ್ನು ತೆರೆಯುತ್ತಾರೆ.

ಅಧ್ಯಕ್ಷರು: Very good. ಈಗ್ ಶ್ರೀ ಎ.ಮಂಜು.

14) ವಿಷಯ: ಕೆಪಿಎಸ್‌ಸಿಗೆ ಅರ್ಜಿ ಸಲ್ಲಿಸಿದಾಗ ಆಕಸ್ಮಿಕವಾಗಿ ಮೂಲ ಪ್ರಮಾಣಪತ್ರಗಳನ್ನು ಹಾಜರುಪಡಿಸದೇ ಇರುವವರೆಗೆ ಮೀಸಲಾತಿ ನೀಡದೆ ಅನ್ಯಾಯವಾಗುತ್ತಿರುವ ಬಗ್ಗೆ.

* * *

ಶ್ರೀ ಎ. ಮಂಜು (ಅರಕಲಗೂಡು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಲೋಕಸೇವಾ ಆಯೋಗ ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಅರ್ಜಿಯೊಂದಿಗೆ ಅಗತ್ಯ ಮೀಸಲಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವಂತಹ ಅಭ್ಯರ್ಥಿಯು ವ್ಯಕ್ತಿತ್ವ ಪರೀಕ್ಷೆ ಅಥವಾ ದಾಖಲಾತಿ ಪರಿಶೀಲನೆಯ ದಿನಾಂಕದಂದು ಆಕಸ್ಮಿಕ ಅಥವಾ ಅನಿವಾರ್ಯ ಕಾರಣಗಳಿಂದ ಮೀಸಲಾತಿಯ ಮೂಲ ಪ್ರಮಾಣ ಪತ್ರಗಳನ್ನು ಹಾಜರುಪಡಿಸಲು ಸಾಧ್ಯವಾಗದಿದ್ದ ಸಂದರ್ಭದಲ್ಲಿ ಅಂತಹ ಅಭ್ಯರ್ಥಿಗಳಿಗೆ ಮೀಸಲಾತಿಯನ್ನು

ನೀಡದೆ ಅನ್ಯಾಯವಾಗುತ್ತಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಕೃಷ್ಣ ಭೈರೇಗೌಡ (ಮಾನ್ಯ ಕೃಷಿ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಲೋಕ ಸೇವಾ ಆಯೋಗವು ಪೂರ್ವಭಾವಿ ಪರೀಕ್ಷೆಗೆ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿ, ಅಧಿಸೂಚನೆ ಹೊರಡಿಸಿದಾಗ ಅಭ್ಯರ್ಥಿಗಳು ತಾವು ಕೋರುವ ಮೀಸಲಾತಿಗಳನ್ನು ಅರ್ಜಿಯಲ್ಲಿ ನಮೂದಿಸುವಂತೆ ಸೂಚಿಸಲಾಗಿರುತ್ತದೆ. ಸದರಿ ಮೀಸಲಾತಿ ಪ್ರಮಾಣ ಪತ್ರಗಳನ್ನು ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಹಾಗೂ ಸರ್ಕಾರವು ನಿಗದಿಪಡಿಸಿರುವ ನಮೂನೆಗಳಲ್ಲಿಯೇ ಪಡೆದಿಟ್ಟುಕೊಳ್ಳುವಂತೆ ಸಹ ಸೂಚಿಸಲಾಗಿರುತ್ತದೆ.

ಮುಖ್ಯ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳಿಂದ ಅರ್ಜಿ ಸ್ವೀಕರಿಸುವ ಸಂದರ್ಭದಲ್ಲಿ ಪೂರ್ವಭಾವಿ ಪರೀಕ್ಷೆಯಲ್ಲಿ ಕೋರಿರುವ ಮೀಸಲಾತಿಗಳಿಗೆ ಸಂಬಂಧಿಸಿದಂತೆ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಲಗತ್ತಿಸುವಂತೆಯೂ ಸಹಾ ಸೂಚಿಸಲಾಗಿರುತ್ತದೆ.

ಮೂಲ ದಾಖಲೆಗಳ ಪರಿಶೀಲನೆ ಹಾಗೂ ವ್ಯಕ್ತಿತ್ವ ಪರೀಕ್ಷೆಯ ಸಂದರ್ಭದಲ್ಲಿ ಅಭ್ಯರ್ಥಿಗಳು ತಮ್ಮ ಅರ್ಜಿಯಲ್ಲಿ ಕೋರಿರುವ ಜಾತಿ/ಗ್ರಾಮೀಣ/ಕನ್ನಡ ಮಾಧ್ಯಮ ಅಭ್ಯರ್ಥಿ/ಅಂಗವಿಕಲ/ಮಾಜಿ ಸೈನಿಕ ಮೀಸಲಾತಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ನಿಗದಿಪಡಿಸಿದ ನಮೂನೆಯಲ್ಲಿ ಮತ್ತು ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರುವ ವಿವಿಧ ಮೂಲ ಮೀಸಲಾತಿ ಪ್ರಮಾಣ ಪತ್ರಗಳನ್ನು ಹಾಜರುಪಡಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ತಿರಸ್ಕರಿಸಿ ಅವರು ಗಳಿಸಿರುವ ಅಂಕಗಳು ಮತ್ತು ಇನ್ನುಳಿದ ಮೀಸಲಾತಿಗಳ ಆಧಾರದ ಮೇರೆಗೆ ಸದರಿಯವರು ಅರ್ಹತೆ ಪಡೆದಲ್ಲಿ ಆಯ್ಕೆಪ್ರಕ್ರಿಯೆಗೆ ಪರಿಗಣಿಸಲಾಗುತ್ತದೆ. ಮೀಸಲಾತಿ ತಿರಸ್ಕೃತಗೊಂಡ ಅಭ್ಯರ್ಥಿಗಳು ತಮ್ಮ ಇತರೆ ಮೀಸಲಾತಿಯಡಿ ತಾವು ಗಳಿಸಿರುವ ಅಂಕಗಳ

ಆಧಾರದ ಮೇಲೆ ಆಯ್ಕೆ ಪ್ರಕ್ರಿಯೆಗೆ ಅರ್ಹತೆ ಹೊಂದಿರದಿದ್ದಲ್ಲಿ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ಸದರಿ ನೇಮಕಾತಿಗಾಗಿ ಮಾತ್ರ ತಿರಸ್ಕರಿಸಲಾಗುವುದು.

ಈ ಕುರಿತಂತೆ ಕೆಲವು ಅಭ್ಯರ್ಥಿಗಳು ತದ ನಂತರದಲ್ಲಿ ಮೂಲ ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ತಾವು ಸಲ್ಲಿಸಿರದ ಮೀಸಲಾತಿ ಪ್ರಮಾಣ ಪತ್ರಗಳ ಮೂಲ ಪ್ರಮಾಣ ಪತ್ರಗಳನ್ನೇ ಹಾಜರುಪಡಿಸುವುದಾಗಿ ಸಮಯಾವಕಾಶವನ್ನು ನೀಡುವಂತೆ ಕೋರುತ್ತಾ ಸಲ್ಲಿಸುವ ಯಾವುದೇ ಕೋರಿಕೆಗಳನ್ನು ಆಯೋಗವು ಮಾನ್ಯ ಮಾಡುವುದಿಲ್ಲ. ಏಕೆಂದರೆ, ಆಯೋಗವು ನೇಮಕಾತಿಯ ವಿವಿಧ ಹಂತಗಳಲ್ಲಿ ಈ ಕುರಿತಂತೆ ಅಭ್ಯರ್ಥಿಗಳಿಗೆ ಸ್ಪಷ್ಟ ನಿರ್ದೇಶನವನ್ನೂ ನೀಡಿರುತ್ತದೆ ಹಾಗೂ ಅಭ್ಯರ್ಥಿಗಳಿಗೆ ಮೂಲ ಪ್ರಮಾಣ ಪತ್ರಗಳನ್ನು ಹಾಜರುಪಡಿಸಲು ಸಮಯಾವಕಾಶ ನೀಡಿದಲ್ಲಿ ನೇಮಕಾತಿ ಪ್ರಕ್ರಿಯೆಯು ವಿಳಂಬವಾಗುತ್ತದೆ.

ಶ್ರೀ ಕೃಷ್ಣ ಭೈರೇಗೌಡ (ಮಾನ್ಯ ಕೃಷಿ ಸಚಿವರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, ಅವರು ಸಮಯಕ್ಕೆ ಸರಿಯಾಗಿ ಅವಶ್ಯಕತೆ ಇರುವಂಥ ದಾಖಲೆಗಳನ್ನು ಅರ್ಜಿಯ ಜೊತೆಗೆ ಕೊಟ್ಟಿಲ್ಲ. ಈಗೇನಾದರೂ ಅದನ್ನು ಸಡಿಲ ಮಾಡಿದರೆ procedural lapse ಆಗಿ, ಅದು ಕೋರ್ಟಿಗೆ ಹೋಗಿ ಅದರಿಂದ ಯಾರಿಗೂ ಅನುಕೂಲವಾಗುವುದಿಲ್ಲ. Procedure ಬಗ್ಗೆ ಮೊದಲೇ ಸ್ಪಷ್ಟವಾಗಿ ಉಲ್ಲೇಖ ಮಾಡಲಾಗಿದೆ. ಅದರಲ್ಲಿ post facto dılute ಮಾಡಿದರೆ ಯಾರಿಗೂ ಅದರಿಂದ ಖಂಡಿತ ಅನುಕೂಲವಾಗುವುದಿಲ್ಲ. ನಾವು ಯಾರಿಗೆ relaxation ಕೊಡುತ್ತೇವೆಯೋ ಅವರಿಗೂ ಅನುಕೂಲವಾಗುವುದಿಲ್ಲ. ಈಗ select ಆಗುತ್ತಿರುವವರಿಗೂ ಸಹ ಅನುಕೂಲವಾಗುವುದಿಲ್ಲ. ಅದು ಸಿಂಧು ಅಲ್ಲ.

ಶ್ರೀ ಎ. ಮಂಜು: ಮಾನ್ಯ ಅಧ್ಯಕ್ಷರೆ, ಅವರು ಉತ್ತರ ಹೇಳುತ್ತಿರುವುದು procedure ಹೇಳಿದ್ದಾರೆ. ಮೊದಲು advertisement ಮಾಡಿದಾಗ ಅರ್ಜಿ

ತೆಗೆದುಕೊಳ್ಳುತ್ತಾರೆ. ಅರ್ಜಿ ಮಾಡಿದಂಥ ಸಂದರ್ಭದಲ್ಲಿ Caste certificate ಎಲ್ಲವನ್ನೂ ಹಾಕಿರುತ್ತಾರೆ.

ಅಧ್ಯಕ್ಷರು: ಇದು ಚರ್ಚೆ ಕಾಲ ಅಲ್ಲ. ಅವರು ಹೇಳಿದ್ದಾರೆ ಬಿಡಿ.

ಶ್ರೀ ಎ. ಮಂಜು: ನೀವೇ ಹೇಳುತ್ತೀರಿ ಅವರು ಮಾಡಿರುವುದು ತಪ್ಪು ಎಂದು, provisional selectionನಲ್ಲಿ ಬಂದಾಗ, ಬರುತ್ತಿರುವಂಥ ಸಂದರ್ಭದಲ್ಲಿ ಕಾರಿನಲ್ಲೋ, ಬಸ್ಸಿನಲ್ಲೋ ಅರ್ಜಿಯನ್ನು ಕಳೆದುಕೊಂಡಾಗ ಅವನಿಗೆ ಅವಕಾಶವನ್ನೇ ಕೊಡದೇ ಇದ್ದರೆ ಹೇಗೆ ಆಗುತ್ತದೆ?

ಅಧ್ಯಕ್ಷರು: ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎ. ಮಂಜು: ಕೊಡಬಹುದು, ಇಲ್ಲವೆಂದರೆ constitutional rightನ್ನು ಉಲ್ಲಂಘನೆ ಮಾಡಿದಂತೆ ಆಗುತ್ತದೆ.

ಅಧ್ಯಕ್ಷರು: ನೋಡಿ, constitutional rights ಉಲ್ಲಂಘನೆಯಾಗುತ್ತದೆ ಎಂದು ಹೇಳುತ್ತಿದ್ದಾರೆ.

ಶ್ರೀ ಕೃಷ್ಣ ಭೈರೇಗೌಡ: ಅರ್ಜಿ ಹಾಕುವಾಗಲೇ ಅದಕ್ಕೆ ಬೇಕಾದಂಥ ಎಲ್ಲಾ certificateಗಳನ್ನು ಅರ್ಜಿ ಜೊತೆಗೆ ಕೊಡಬೇಕೆಂದು ಸ್ಪಷ್ಟವಾಗಿ ಮಾಹಿತಿ ಕೊಡಲಾಗಿದೆ. ಅವರು ಆ ಸಂರ್ಭದಲ್ಲಿ ಕೊಟ್ಟಿಲ್ಲ. ಹಾಗಾಗಿ ಈ ಸಮಸ್ಯೆಯಾಗಿದೆ.

ಅಧ್ಯಕ್ಷರು: ಶ್ರೀ ಗೋವಿಂದ ಎಂ ಕಾರಜೋಳ.

15) ವಿಷಯ: ಕರ್ನಾಟಕ ಲೋಕಸೇವಾ ಆಯೋಗಕ್ಕೆ ಹೈದರಾಬಾದ್ ಕರ್ನಾಟಕ ಭಾಗದಿಂದ ಒಬ್ಬ ಸದಸ್ಯರನ್ನು ನೇಮಕ ಮಾಡಿಲ್ಲದಿರುವ ಬಗ್ಗೆ.

* * *

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ): ಸನ್ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ಲೋಕಸೇವಾ ಆಯೋಗ ಪ್ರಾರಂಭವಾಗಿ ಸುಮಾರು